## ಕರ್ನಾಟಕ ಸರ್ಕಾರ

ಸಂಖ್ಯೆ:ಪಮೂಶಿಇ/ಇ-ಆಡಳಿತ/ಐಸಿಟಿ-02/2013-2014

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಕ್ರಾಸ್, ಮಲ್ಲೇಶ್ವರಂ,
ಸಂಪಿಗೆ ರಸ್ತೆ, ಬೆಂಗಳೂರು,
ದಿನಾಂಕ: -03-2014.

ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣಿ ಇಲಾಖೆ,
-------------------
-----------------ಜಿಲ್ಲೆ.

ಮಾನ್ಯರೆ,

**ವಿಷಯ:** ಕೇಂದ್ರ ಸರ್ಕಾರದ ಪುರಸ್ಕೃತ ಐಸಿಟಿ ಫೇಸ್ 2 ಯೋಜನೆಯ 2008-09 ರಲ್ಲಿ ಐದು ವರ್ಷದ ಕಾಲಾವಧಿ ಅನ್ವಯಿಸುವಂತೆ ಕರ್ನಾಟಕ ರಾಜ್ಯದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಾವಧಿ ಮುಗಿದಿರುವ ಬಗ್ಗೆ.

**ಉಲ್ಲೇಖ:** 1. ದಿನಾಂಕ: 01-12-2008ರ ಮತ್ತು 07-01-2009ರ ಸಭೆಯ ನಡಾವಳಿಗಳು.
2. ದಿನಾಂಕ: 19-11-2008ರಲ್ಲಿ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಮೆ. ಎಡ್ಯುಕಾಂ ಸಂಸ್ಥೆಯ ನಡುವೆ ಏರ್ಪಟ್ಟ ಕರಾರು.

******

ಕೇಂದ್ರ ಸರ್ಕಾರದ ಪುರಸ್ಕೃತ ಐಸಿಟಿ ಫೇಸ್ 2 ಯೋಜನೆಯನ್ನು 2008-09 ರಲ್ಲಿ ಐದು ವರ್ಷದ ಕಾಲಾವಧಿಗೆ ಅನ್ವಯಿಸುವಂತೆ ಕರ್ನಾಟಕ ರಾಜ್ಯದ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಗತಗೊಳಿಸಲು ಮೇಲಿನ ಉಲ್ಲೇಖದಲ್ಲಿ ಆದೇಶವಾಗಿರುತ್ತದೆ. ಈ ಸಂಬಂಧ ನಿಯಮಾನುಸಾರ ಟೆಂಡರ್ ಕರೆದು ಮೆ.ಎಡ್ಯುಕಾಮ್ ಸಲ್ಯೂಷನ್ಸ್ ಲಿಮಿಟೆಡ್ ಬೆಂಗಳೂರು ಇವರಿಗೆ ಯೋಜನೆಯ ಅನುಷ್ಠಾನಕ್ಕಾಗಿ ಕಾರ್ಯಾದೇಶ ನೀಡಿದೆ. ಅದರಂತೆ ದಿನಾಂಕ:20-11-2008 ರಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಮೆ.ಎಡ್ಯುಕಾಮ್ ಸಂಸ್ಥೆಯ ನಡುವೆ ಕರಾರು ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಸದರಿ ಯೋಜನೆಯು 2008-09 ರಿಂದ 2012-13 ರವರೆಗೆ ಐದು ವರ್ಷದ ಅವಧಿಯನ್ನು ಒಳಗೊಂಡಿದೆ. ಆದರೆ ದಿನಾಂಕ: 01-12-2008 ರಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಹಾಗೂ ಮೆ. ಎಡ್ಯುಕಾಂ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ನಡೆದ ಸೌಹಾರ್ದ ಸಭೆಯಲ್ಲಿ ಕರಾರು ಒಪ್ಪಂದದ ದಿನಾಂಕವು ಶೈಕ್ಷಣಿಕ ವರ್ಷದ ಮದ್ಯದಲ್ಲಿ ಇರುವುದರಿಂದಲೂ ಹಾಗೂ ಗಣಕಯಂತ್ರಗಳ ಪೂರೈಕೆಗೆ ಕಾಲಾವಕಾಶದ ಅವಶ್ಯಕತೆ ಇರುವುದರಿಂದಲೂ ಸದರಿ ಯೋಜನೆಯು 2009-10 ನೇ ಶೈಕ್ಷಣಿಕ ವರ್ಷದ ಮೇ 1 ರಿಂದ ಪ್ರಾರಂಭಿಸುವಂತೆ ತೀರ್ಮಾನಿಸಲಾಯಿತು ಈ ನಿಟ್ಟಿನಲ್ಲಿ ಸದರಿ ಯೋಜನೆಯು 2009-10 ರಿಂದ 2013-14 ರ ವರೆಗೆ ಕಾರ್ಯೋನ್ಮುಖವಾಗಿರುತ್ತದೆ ಹಾಗೂ 2014 ನೇ ಏಪ್ರಿಲ್‌ಗೆ ಕರಾರು ಅವಧಿಯು ಕೊನೆಗೊಳ್ಳುತ್ತದೆ.

ಈ ಮೇಲಿನ ಅಂಶಗಳಿಂದಾಗಿ ಕರಾರು ಒಪ್ಪಂದ ನಿಯಮದಂತೆ ಕರಾರು ಅವಧಿ ಮುಗಿದ ತಕ್ಷಣ ಗುತ್ತಿಗೆದಾರರಾದ ಮೆ. ಎಡ್ಯುಕಾಂ ಸಲ್ಯೂಷನ್ಸ್ ರವರು ಕಾಲೇಜುಗಳಿಗೆ ನೀಡಿದ ಗಣಕಯಂತ್ರಗಳು ಹಾಗೂ ಸಂಬಂಧಿಸಿದ ಪರಿಕರಗಳನ್ನು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ ದೃಢೀಕರಿಸಿ ಪ್ರಾಂಶುಪಾಲರಿಗೆ ಹಸ್ತಾಂತರಿಸಿ ದೃಢೀಕರಣವನ್ನು ಪಡೆದು ಇಲಾಖೆಗೆ ಸಲ್ಲಿಸಿ ತಮ್ಮ ಗುತ್ತಿಗೆಯ ಕರಾರಿನಿಂದ ಬಿಡುಗಡೆ ಪಡೆಯಲು ತಿಳಿಸಿದೆ. ಈ ಮೇಲಿನ ಅಂಶಗಳನ್ನು ಗಮನಿಸಿ ಜಿಲ್ಲಾ ಉಪನಿರ್ದೇಶಕರು ಆಯಾಕಾಲೇಜಿನ ಪ್ರಾಂಶುಪಾಲರಿಗೆ ಸೂಕ್ತ

....2

ಮಾರ್ಗದರ್ಶನ ನೀಡಿ ಎಲ್ಲಾ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ದೃಢೀಕರಿಸುವಂತೆ ಸೂಚಿಸಲು ತಿಳಿಸಿದೆ. ಒಂದುವೇಳೆ ಯಾವುದೇ ಉಪಕರಣ ಕಾರ್ಯನಿರ್ವಹಿಸದಿದ್ದಲ್ಲಿ ಅಥವಾ ಲಭ್ಯವಿಲ್ಲದಿದ್ದಲ್ಲಿ ಅಥವಾ ದುರಸ್ತಿಗೊಳಪಟ್ಟಿದಲ್ಲಿ ನಿಗದಿತ ನಮೂನೆ ಮತ್ತು ಚೆಕ್ ಲಿಸ್ಟ್‌ನಲ್ಲಿ ಸ್ಪಷ್ಟವಾಗಿ ನಮೂದಿಸಿ (ಈ ಹಸ್ತಾಂತರ ಪ್ರಕ್ರಿಯೆ ಸಂಬಂಧ ಕಾಲೇಜಿನಲ್ಲಿ ಪ್ರತ್ಯೇಕ ಕಡತ ನಿರ್ವಹಣೆ ಮಾಡುವುದು) ಉಪ ನಿರ್ದೇಶಕರ ಮೂಲಕ ಕೇಂದ್ರ ಕಛೇರಿಗೆ ವರದಿ ಮಾಡುವಂತೆ ಆದೇಶಿಸಿದೆ.

ಜಂಟಿ ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ,

**ಪ್ರತಿಗಳು:**

1. ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು,____________________,
   ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ.
3. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ.
4. ಕಛೇರಿ ಪ್ರತಿ.

## ವರದಿಯಲ್ಲಿ ನಮೂದಿಸಬೇಕಾದ ಇತರ ಅಂಶಗಳು

| ಕ್ರ ಸಂ | ವಿವರ | ವರದಿ |
|---|---|---|
| 1. | 2009-10 ನೇ ಸಾಲಿನಿಂದ 30-04-2014ರವರೆಗೆ ಸಮರ್ಪಕ ಪಠ್ಯ ಕ್ರಮವನ್ನು (Course Material) ಒದಗಿಸಿದ್ದಾರೆಯೇ? | |
| 2. | 2009-10 ನೇ ಸಾಲಿನಿಂದ ಈವರೆವಿಗೂ ನಿಯೋಜಿತ ಕಂಪ್ಯೂಟರ್ ಶಿಕ್ಷಕರಿಗೆ ಸಮರ್ಪಕವಾಗಿ ವೇತನ ವಿತರಿಸಿದ್ದಾರೆಯೇ? (ಇಲ್ಲವಾದಲ್ಲಿ ಸಂಕ್ಷಿಪ್ತ ವರದಿ) | |
| 3. | 2009-10 ನೇ ಸಾಲಿನಿಂದ ಈವರೆವಿಗೂ ಮೆ. ಎಡ್ಯುಕಾಂ ಸಂಸ್ಥೆಯವರು ಇಂಟರ್‌ನೆಟ್ ಬಿಲ್ ಹಾಗೂ ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿಸಿದ್ದಾರೆಯೇ? ಬಾಕಿ ಇದ್ದಲ್ಲಿ ಪಾವತಿಯಾಗದ ಮೊತ್ತ (ಬಿಲ್ ಪ್ರತಿ ಸಮೇತ) | |
| 4. | ಕನಿಷ್ಠ 2 ಉಪನ್ಯಾಸಕರಿಗೆ ಗಣಕ ತರಬೇತಿ ನೀಡಿದ್ದಾರೆಯೇ? | |
| 5. | ಕಂಪ್ಯೂಟರ್ ಶಿಕ್ಷಕರು ಗೈರು ಹಾಜರಾಗಿದ್ದಾರೆಯೇ? (ಇದ್ದಲ್ಲಿ ಎಷ್ಟು ತಿಂಗಳಿಂದ) | |
| 6. | ಕನಿಷ್ಠ 2 ಕಿರು ಪರೀಕ್ಷೆಗಳು ಮತ್ತು 1 ವಾರ್ಷಿಕ ಪರೀಕ್ಷೆ ನಡೆಸಲಾಗಿದೆಯೇ? | |
| 7. | ಸೈನ್ ಆಫ್‌ನಲ್ಲಿ ನಮೂದಿಯಾಗಿರುವ ಎಲ್ಲಾ ಹಾರ್ಡ್‌ವೇರ್‌ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ/ದುರಸ್ಥಿಯಾಗಿವೆಯೇ/ ಲಭ್ಯವಿಲ್ಲವೇ?(ಹಾಗಿದ್ದಲ್ಲಿ ವರದಿ ಮಾಡುವುದು). | |

ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
________________

ಪ್ರಾಚಾರ್ಯರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
________________

# ಚೆಕ್ ಲಿಸ್ಟ್

2009 ಮೇ 1 ರಿಂದ ಪ್ರಾರಂಭಿಸಿ 2014 ರ ಎಪ್ರೀಲ್ 30ಕ್ಕೆ ಕರಾರಿನಂತೆ ಅಂತ್ಯವಾಗಲಿರುವ ಮೆ. ಎಡ್ಯುಕಾಂ ಸಂಸ್ಥೆಯಿಂದ ಒದಗಿಸುತ್ತಿರುವ ಗಣಕ ಮತ್ತು ಗಣಕಾಧಾರಿತ ಶಿಕ್ಷಣ ಯೋಜನೆಗೆ ಒಳಪಟ್ಟ ಎಲ್ಲಾ 708 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳು ತಮ್ಮ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಧೃಢೀಕರಿಸಿ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯಕ್ಕೆ ಕಳುಹಿಸಬೇಕಾದ ಹಾರ್ಡ್‌ವೇರ್ ಮತ್ತಿತರ ವ್ಯತ್ಯಯ ವರದಿಯನ್ನು ಕೆಳಕಂಡ ಚೆಕ್ ಲಿಸ್ಟ್‌ನಂತೆ ವರದಿ ಮಾಡುವುದು.

| ಕ್ರ ಸಂ | ಹಾರ್ಡ್‌ವೇರ್/ಸಾಫ್ಟ್‌ವೇರ್ | ಲಭ್ಯ ಇರಬೇಕಾದ ಸಂಖ್ಯೆ | ದುರಸ್ಥಿ ಯಾಗಿದಲ್ಲಿ | ಕಳವು ಆಗಿದಲ್ಲಿ | ಕಾರ್ಯನಿರ್ವ ಸದೇ ಇದ್ದಲ್ಲಿ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Server | 1 | | | | |
| 2. | Tinclient | 10/15 | | | | |
| 3. | 1 | 1 | | | | |
| 4. | 2 | 1 | | | | |
| 5. | 3 | 1 | | | | |
| 6. | 4 | 1 | | | | |
| 7. | 5 | 1 | | | | |
| 8. | 6 | 1 | | | | |
| 9. | 7 | 1 | | | | |
| 10 | 8 | 1 | | | | |
| 11. | 9 | 1 | | | | |
| 12. | 10 | 1 | | | | |
| 13. | 11 | 1 | | | | |
| 14. | 12 | 1 | | | | |
| 15. | 13 | 1 | | | | |
| 16. | 14 | 1 | | | | |
| 17. | 15 | 1 | | | | |
| 18. | Key Board | 10/15 | | | | |
| 19 | Mouse | 10/15 | | | | |
| 20. | UPS | 1 | | | | |
| 21. | Battery | 16 | | | | |
| 22. | Printer | 1 | | | | |
| 23. | Scanner | 1 | | | | |
| 24. | Digital Camera | 1 | | | | |
| 25. | Multi Media Projector | 1 | | | | |
| 26. | Head Phones | 1 | | | | |

ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,

ಪ್ರಾಚಾರ್ಯರು,
ಸರ್ಕಾರಿ ಪದವಿ ಪೂರ್ವ ಕಾಲೇಜು,

ಗುತ್ತಿಗೆದಾರರು,
ಮೆ. ಎಡ್ಯುಕಾಂ ಸಲ್ಯೂಷನ್ಸ್.